ಇಂದು ದಿನಾಂಕ 16.02.2018 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

ಪಾಟಿ ಸವಾಲುಃ ಜೆಡಿಆರ್ ಪರ ಶ್ರೀ ಯುಡಿಡಿ ವಕೀಲರಿಂದ

1. ನನಗೆ ಡಿಹೆಚ್ಆರ್ ಮತ್ತು ಜೆಡಿಆರ್‌ರವರ ಕುಟುಂಬದ ಪರಿಚಯ ಇದೆ. ಜೆಡಿಆರ್ ನಂಬರ್ಃ 2ಡಿರವರ ಬಗ್ಗೆ ನನಗೆ ತಿಳಿದಿದೆ. ಸದರಿಯವರಿಗೆ ಸುಮಾರು 26 ರಿಂದ 28 ವರ್ಷ ವಯಸ್ಸು ಇರಬಹುದು. ಬಸವಣ್ಣೆಪ್ಪರವರ ಜಮೀನಿನ ಸರ್ವೆ ನಂಬರ್ ನನಗೆ ಗೊತ್ತಿಲ್ಲ. ಯಡಗೋಡಿ ಮತ್ತು ಬಸವಣ್ಣೆಪ್ಪರವರ ಜಮೀನಿನ ನಡುವೆ ರಸ್ತೆ ಇದೆ ಎಂದರೆ ಸಾಕ್ಷಿಯು ಕಾಲುದಾರಿ ಇದೆ ಎಂದು ನುಡಿಯುತ್ತಾರೆ. ಸದರಿ ರಸ್ತೆಗೆ ಹಳೇ ಶಿಕಾರಿಪುರ ರಸ್ತೆ ಎಂದು ಕರೆಯುತ್ತಾರೆ ಎಂದರೆ ಸರಿಯಲ್ಲ. ಸದರಿ ರಸ್ತೆಯಲ್ಲಿ ತಂತಿ ಬೇಲಿ ಇರುವುದಿಲ್ಲ, ಸಾಕ್ಷಿಯು ಮುಂದುವರೆದು ಈ ಮೊದಲು ತಂತಿಬೇಲಿ ಇತ್ತು, ಜಗಳವಾದ ನಂತರ ಅದನ್ನು ತೆಗೆದಿರುತ್ತಾರೆ ಎಂದು ನುಡಿಯುತ್ತಾರೆ. ನ್ಯಾಯಾಲಯದ ಆದೇಶ ಬಸವಣ್ಣೆಪ್ಪರವರ ಪರವಾಗಿ ಆದ ನಂತರ ಸದರಿ ಬೇಲಿಯನ್ನು ಕಿತ್ತು ಹಾಕಿರುತ್ತಾರೆ.

2. ಬೇಲಿಯನ್ನು ಕಿತ್ತು ಹಾಕಿದ ನಂತರ ಬೇಲಿಯನ್ನು ಹಾಕುವ ಪೂರ್ವದಲ್ಲಿ ಮತ್ತೆ ಜಗಳವಾಗಿರುತ್ತದೆ. ಸದರಿ ವಿಚಾರವನ್ನು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಬರೆಸಿರಬಹುದು. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ನ್ಯಾಯಾಲಯಕ್ಕೆ ನಾನು ಯಾವಾಗ ಸಲ್ಲಿಸಿದ್ದೇನೆ ಎಂದು ದಿನಾಂಕವನ್ನು ನಿಖರವಾಗಿ ಹೇಳಲಾಗುವುದಿಲ್ಲ. ಸುಮಾರು ಎಷ್ಟು ದಿನಗಳ ಹಿಂದೆ ಪ್ರಮಾಣ ಪತ್ರವನ್ನು ಸಲ್ಲಿಸಿದ್ದೇನೆ ಎಂದು ನನಗೆ ಹೇಳಲಾಗುವುದಿಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ನಮೂದಿಸಿರುವ ಸಂಗತಿಗಳ ಬಗ್ಗೆ ನನಗೆ ಮಾಹಿತಿ ಇದೆ. ಚೌಡಪ್ಪ ದುರ್ಗಪ್ಪ ಯಡಗೋಡಿಯವರು ಸುಮಾರು 7-8 ವರ್ಷಗಳ ಹಿಂದೆ ಮರಣ ಹೊಂದಿರುತ್ತಾರೆ. ಜೆಡಿಆರ್ ನಂಬರ್ಃ 2ಸಿ ರವರಿಗೆ ಐದು ವರ್ಷಗಳ ಹಿಂದೆ ಸುಮಾರು 25 ವರ್ಷ ವಯಸ್ಸಾಗಿತ್ತು. ಜೆಡಿಆರ್ ನಂಬರ್ಃ 2ಬಿ ರವರಿಗೆ ಐದು ವರ್ಷಗಳ ಹಿಂದೆ ಸುಮಾರು 35 ರಿಂದ 40 ವರ್ಷ ವಯಸ್ಸಾಗಿತ್ತು.

3. ಸಿದ್ದವೀರಪ್ಪನವರು ಮರಣ ಹೊಂದಿ ಸುಮಾರು 15 ವರ್ಷ ಆಗಿರಬಹುದು. ನಾನು ಕೋಡಮಗ್ಗಿ ಗ್ರಾಮದಲ್ಲಿ ಹುಟ್ಟಿದಾಗಿನಿಂದಲೂ ವಾಸವಿರುತ್ತೇನೆ. ತಂತಿಬೇಲಿಯನ್ನು ಬಸವಣ್ಣೆಪ್ಪರವರು ತಮ್ಮ ಆಸ್ತಿಯ ಹದ್ದುಬಸ್ತಿಗೋಸ್ಕರವೇ ಹಾಕಿಕೊಂಡಿದ್ದರು ಎಂದು ಸೂಚಿಸುವುದು ಸರಿಯಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲಿ ನಮೂದಿಸಿರುವಂತೆ ಯಾವುದೇ ಘಟನೆ ನಡೆದಿಲ್ಲ ಎಂದು ಸೂಚಿಸುವುದು ಸರಿಯಲ್ಲ. ಯಾವುದೇ ರೀತಿ ಘಟನೆ ನಡೆಯದೇ ಇದ್ದರೂ ಸಹ ಬಸವಣ್ಣೆಪ್ಪರವರ ಸ್ನೇಹಕ್ಕೆ ಕಟ್ಟುಬಿದ್ದು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಜೆಡಿಆರ್‌ರವರು ಯಾವುದೇ ರೀತಿ ಕಾನೂನು ಉಲ್ಲಂಘನೆ ಮಾಡದೇ ಇದ್ದರೂ ಸಹ ಉಲ್ಲಂಘನೆ ಮಾಡಿದ್ದಾರೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಜೆಡಿಆರ್ 2ಎ ರಿಂದ 2ಸಿ ಮತ್ತು ಅವರ ಪರ ವಕೀಲರು ಹಾಜರು ಇರುವುದಿಲ್ಲ, ಆದ್ದರಿಂದ ಪಾಟೀ ಸವಾಲನ್ನು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರುವಿಚಾರಣೆ : ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

ನನ್ನ ಸಮಕ್ಷಮ

ಸಹಿ/-

ಓ ಹೇ ಕೇ ಸರಿ ಇದೆ.

ಹೆಚ್ಚುವರಿ ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಹಿರೇಕೆರೂರು.